ಜನತಾ ಹಾಗೂ ಹುಡ್ಕೋ ಮನೆ ನಿವೇಶನಗಳ ದುರಸ್ತಿ ಬಗ್ಗೆ

ಕರ್ತೆ. ಶ್ರೀ ಗೋಪಾಲ ಮಂಕಿಂದ ಕಾನಡೆ (ಸಿರ್ಸಿ).--ಮಾನ್ಯ ಗ್ರಾಮಾಣ ಅಭಿವೃದ್ಧಿ, ಪಂಚಾಯತ್ ರಾಜ್ ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ ಸಿದ್ದಾಪುರ ತಾಲ್ಲೂಕಿನಲ್ಲಿ ಜನತಾ ಹಾಗೂ ಹುಡ್ಕೋ ಯೋಜನೆಗಳ ಮೇರೆಗೆ ನಿರ್ಮಿಸಿದ ಮನೆಗಳು ಕುಸಿದು ಬಿದ್ದಿರುವುದು ಹಾಗೂ ಶಿಥಿಲಗೊಂಡಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅವುಗಳನ್ನು ದುರಸ್ತಿ ಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಇ) ೧೯೮೫-೮೬ನೇ ಸಾಲಿನಲ್ಲಿ ಸದರಿ ತಾಲ್ಲೂಕಿನಲ್ಲಿ ಮೇಲ್ಕಂಡ ಯೋಜನೆಯ ಮೇರೆಗೆ ನಿರ್ಮಿಸಿ ಪೂರ್ತಿಗೊಳಿಸಿದ ಮನೆಗಳ ಸಂಖ್ಯೆ ಎಷ್ಟು ?

ಈ) ಪ್ರಸಕ್ತ ಸಾಲಿನಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲು ಮಂಜೂರಾತಿ ನೀಡಲಾಗಿದೆ ?

ಶ್ರೀ ಅಬ್ದುಲ್ ನಜೀರ್ ಸಾಬ್(ಗ್ರಾಮಾಣ ಅಭಿವೃದ್ಧಿ, ಪಂಚಾಯತ್‌ರಾಜ್, ವಸತಿ ಮತ್ತು ವಕ್ಫ್ ಸಚಿವರು).--

ಅ) ಹೌದು

ಆ) ಬಿದ್ದಿರುವ ಮನೆಗಳ ಸಾಲದ ಹಣವನ್ನು ವಸೂಲಾ ಮಾಡಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಇ) ತಾಲ್ಲೂಕುಗಳು.--

೧) ಸಿರ್ಸಿ ೧೬೧ ಮನೆಗಳು (ತಾಲ್ಲೂಕುಗಳು)

೨) ಸಿದ್ದಾಪುರ ೧೭೦ ಮನೆಗಳು (ತಾಲ್ಲೂಕುಗಳು)

ಈ) ಸಿರ್ಸಿ ತಾಲ್ಲೂಕು ೧೭೦ ಮನೆಗಳು, ಸಿದ್ದಾಪುರ ತಾಲ್ಲೂಕು ೭೦ ಮನೆಗಳು

ಚಿಕ್ಕನಾಯಕನ ಹಳ್ಳಿ ನೀರು ಸರಬರಾಜು ಯೋಜನೆ ಬಗ್ಗೆ

೧೩೭೧. ಶ್ರೀ ಬಿ. ಲಕ್ಕಪ್ಪ.--ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕನಾಯಕನ ಹಳ್ಳಿ ನಗರಕ್ಕೆ ವಿಸ್ತರಣಾ ಯೋಜನೆಯಲ್ಲಿ ಕುಡಿಯುವ ನೀರು ಯೋಜನೆ ಮಂಜೂರಾಗಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಎಷ್ಟು ವರ್ಷಗಳಾಯಿತು ಹಾಗೂ ಇಷ್ಟು ವಿಳಂಬಕ್ಕೆ ಕಾರಣವೇನು ?

ಇ) ಈ ಯೋಜನೆಯನ್ನು ಯಾವಾಗ ಪೂರ್ತಿಗೊಳಿಸಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).--

ಅ) ನಿಜ

ಆ) ೫ ವರ್ಷಗಳಾಯಿತು, ೨.೫ ಲಕ್ಷ ಲೀಟರ್ ಮೇಲ್ಮಟ್ಟದ ಜಲಸಂಗ್ರಹಾಗಾರದ ಕೆಲಸ ಹೊರತು, ಎಲ್ಲಾ ಕೆಲಸಗಳು ಮುಗಿದು ಜುಲೈ ೧೯೮೫ರಲ್ಲಿ ಪುರಸಭೆಯವರಿಗೆ ಒಪ್ಪಿಸಲಾಗಿದೆ ಮೇಲ್ಮಟ್ಟದ ಜಲಸಂಗ್ರಹಾಗಾರದ ಕೆಲಸವನ್ನು ಜುಲೈ ೧೯೮೭ರೊಳಗೆ ಪೂರೈಸಲಾಗುವುದು.

ಇ) ಉದ್ಭವಿಸುವುದಿಲ್ಲ.